

## ಕಳೆದ ಸಂಚಿಕೆಯಲ್ಲಿ

ಮನೆಯನ್ನು ರಿತಿಕ್ ಹೆಸರಿನಲ್ಲಿ ನೋಂದಣಿ ಮಾಡಿಸಿ ಮನೆಗೆ ಬಂದ ಸುಗಂಧಾ–ರಿತಿಕ್, ಮುಂದೆ ಬೇರೆ ಬೇರೆಯಾದರೆ ಸಮಸ್ಯೆಯಾಗುತ್ತದೆ ಎಂಬ ಮಾತು ಬರುತ್ತದೆ. ಏಕೆಂದರೆ ಮನೆಗೆ ಹದಿನಾಲ್ಕು ಲಕ್ಷ ರೂಪಾಯಿಗಳನ್ನು ಇಬ್ಬರೂ ಸಮಾನವಾಗಿ ಹಾಕಿದ್ದರು. ಗೃಹಪ್ರವೇಶ ಮಾಡುವ ತೀರ್ಮಾನವಾಗುತ್ತದೆ. ಸುಗಂಧಾ ತಾಯಿ, ರಿತಿಕ್ ಹೆತ್ತವರನ್ನು ಕರೆಯದಿರಲು ನಿರ್ಧರಿಸುತ್ತಾರೆ. ಇಬ್ಬರ 'ಕಾಮನ್ ಫ್ರೆಂಡ್ಸ್' ಅನ್ನು ಮಾತ್ರ ಕರೆದು ಪಾರ್ಟಿ ಮಾಡುವ ಎಂದು ಮಾತಾಡಿಕೊಳ್ಳುತ್ತಾರೆ. ಪಾರ್ಟಿ ಆಗಿ ಮೂರು ತಿಂಗಳ ಬಳಿಕ ಇವರಿದ್ದ ಕಾಲೊನಿಯಲ್ಲಿ 'ಹಲ್ದಿ–ಕುಂಕುಮ್' ಕಾರ್ಯಕ್ರಮ ನಡೆಸಿ ಸುಗಂಧಾಳನ್ನು ಆಕೆಯ ಗೆಳತಿ ಉಮಾ ಕರೆಯುತ್ತಾರೆ. ಈ ಮಧ್ಯೆ ಒಂದು ದಿನ ದಿಢೀರ್ ಎಂದು ರಿತಿಕ್ ಅಕ್ಕ ಮನೆಗೆ ಬರುತ್ತಾರೆ. ನಾಲ್ಕು ದಿನ ಇದ್ದು ಹೋಗುತ್ತಾರೆ. ಅಮ್ಮ ಹಾಗೂ ಮನೆಯವರನ್ನು ದೂರ ಮಾಡಿರುವ ಬಗ್ಗೆ ರಿತಿಕ್ ಮೇಲೆ ಆಕ್ಷೇಪ ವ್ಯಕ್ತಪಡಿಸುತ್ತಾರೆ. ಹೀಗಿರುವಾಗ ಒಂದು ದಿನ ಕರವಾಚೌಥ್ ಹಬ್ಬಕ್ಕೆ ಉಮಾ ವರ್ಮಾ ಸುಗಂಧಾಳನ್ನು ಆಹ್ವಾನಿಸುತ್ತಾರೆ. ಸುಗಂಧಾ ಅಲ್ಲಿಗೆ ಹೋದಾಗ ರಿತಿಕ್ ಅನ್ನೂ ಕರೆಸುತ್ತಾರೆ. ಆಗ ಇರಿಸುಮುರಿಸು ಆಗುವ ಸರದಿ ಸುಗಂಧಾಳದ್ದಾಗುತ್ತದೆ.

ಮೆದುಳಿನಿಂದ 'ಡಿಲೀಟ್' ಮಾಡಬೇಕಾಗುವುದು; ತದನಂತರ ಅವನು ನನಗೆ, ಹೆಂಡತಿ ಅಥವಾ ಇಟ್ಟುಕೊಂಡವಳು ಶಬ್ದವನ್ನು ಹೊರತುಪಡಿಸಿ ಬೇರೆ ಯಾವ ಹೆಸರನ್ನು ಕೊಡುತ್ತಾನೆ ಎಂಬುದನ್ನು ನಿರ್ಧರಿಸಬೇಕಾಗುತ್ತದೆ. ಒಂದು ವೇಳೆ ಅವನಿಗೆ ಯಾವ ಹೆಸರೂ ಹೊಳೆಯದಿದ್ದರೆ, ಅವನು ನನ್ನನ್ನು ಮತ್ತು ನಮ್ಮ ಈ ಸಂಬಂಧವನ್ನು ಶಾಶ್ವತವಾಗಿ ಮರೆಯುವುದು ಲೇಸು. ಒಬ್ಬ ಸ್ವಾತಂತ್ರ್ಯಪ್ರಿಯ ಹೆಣ್ಣಿಗೆ ಸಂಬೋಧನೆ ಸಹ ಮುಖ್ಯವಾಗುತ್ತದೆ, ಇದನ್ನು ಅವನು ಅರಿಯಲೇಬೇಕಾಗುವುದು.

'ನೀನು ಪೋಕರಿ!' ಅವನು ಬ್ರೇಕ್‌ಅಪ್ ಆದ ಎರಡು ವಾರಗಳ ನಂತರ ಹೀಗೆಯೇ ಹೇಳಿದ್ದ, 'ನೀನು ಒಬ್ಬನೊಂದಿಗೆ ಅವನ ವಿವಾಹವಾಗದ ಹೆಂಡತಿಯಾಗಿ ಇರಬಲ್ಲೆಯಾದರೆ, ಹತ್ತು ಜನರೊಂದಿಗೂ ಇರಬಲ್ಲೆ, ನನಗಿಂತ ಮೊದಲು ಎಷ್ಟು ಜನರೊಂದಿಗಿದ್ದೆಯೋ, ಯಾರಿಗೆ ಗೊತ್ತು'. ರಿತಿಕ್ ತನ್ನ ಸಿಟ್ಟನ್ನು ನನ್ನ ಮೇಲೆ ಸುರಿಯುತ್ತಿದ್ದ. ಆಗ ನನಗೇನೂ ಅನ್ನಿಸಿರಲಿಲ್ಲ. ಏಕೆ? ನಾನು ಅವನಿಂದ ಬೇರೆಯಾಗಿ ಸಂತೋಷವಾಗಿದ್ದೆ, ಇಲ್ಲ, ಇದು ಸುಳ್ಳು, ನಾನು ಅವನಿಂದ ಬೇರೆಯಾದದ್ದು ಒಳಿತೆಂದು ಅನ್ನಿಸಿರಲಿಲ್ಲ. ಕಡೇಪಕ್ಷ ನಾವು ಬೇರೆಯಾದ ರೀತಿ ನನಗೆ ಸ್ವಲ್ಪವೂ ಹಿಡಿಸಲಿಲ್ಲ. ಇದು ಶಿಷ್ಟ ವಿಧಾನವಾಗಿರಲಿಲ್ಲ. ನಾವು ಜಗಳವಾಡಿದ್ದೆವು, ನಂತರ ಒಬ್ಬರಿಗೊಬ್ಬರು ತಳ್ಳಿಕೊಂಡು ಬೇರೆಯಾಗಿದ್ದೆವು.

ಈ ರೀತಿಯಲ್ಲಿ ಬೇರೆಯಾಗುವುದನ್ನು ನಾನು ಕನಸಿನಲ್ಲೂ ಕಲ್ಪಿಸಿಕೊಂಡಿರಲಿಲ್ಲ, ಅವನೂ ಕಲ್ಪಿಸಿಕೊಂಡಿರಲಿಲ್ಲವೇನೋ. ಅದರೂ ಅವನು ಬದಲಾಗಿದ್ದ. ಅವನು ಈ ಮೊದಲಿನ ರಿತಿಕ್ ಆಗಿ ಉಳಿದಿರಲಿಲ್ಲ. ಅವನು ಈ ಮೊದಲು ಸಿನಿಮಾದ ರಿತಿಕ್ ರೋಶನ್‌ನಂತೆ 'ಕಹೋ ನ ಪ್ಯಾರ್ ಹೈ' ಎಂಬ ಅಂದಾಜಿನಲ್ಲಿ ನನ್ನ ಹಿಂದೆ ಮುಂದೆ ಸುಳಿದಾಡುತ್ತಿದ್ದ. ವಿವಾಹವನ್ನು ಮಾಡಿಕೊಳ್ಳದೆ 'ಲಿವ್ ಇನ್ ರಿಲೇಶನ್'ನಲ್ಲಿ ನನ್ನೊಂದಿಗಿರಲು ತನ್ನ ಮನೆಯವರೊಂದಿಗೆ ಮನಸ್ತಾಪ ಸಹ ಮಾಡಿಕೊಂಡಿದ್ದ. ಕ್ರಮೇಣ ಸಾಮಾಜಿಕತೆಯ ಪ್ರಭಾವದಿಂದಾಗಿ ಅವನು ನಮ್ಮ ಪರಸ್ಪರ ಪ್ರೇಮ ಸಂಬಂಧವನ್ನು 'ಕಾನೂನು ಬಾಹಿರ' ಎಂದು ತಿಳಿಯಲಾರಂಭಿಸಿದ್ದ.

ನಾವು ಬೇರೆಯಾಗುವ ಜಗಳ ಅಲ್ಲಿಂದಲೇ ಆರಂಭವಾಗಿತ್ತು. ಅದೊಂದು ಅನವಶ್ಯಕ ಮಾತಿನ ಜಗಳದ ನಡುವೆ ಅವನು ನನ್ನನ್ನು 'ಇಟ್ಟುಕೊಂಡವಳು' ಎಂದಿದ್ದ. ಅವನ ಈ ಅನಿಸಿಕೆ ಅವನ ಮನಸ್ಸಿನ ಮೂಲೆಯೊಂದರಲ್ಲಿ ಬೇರಾಗಿ ಜಮಾಯಿಸಿ ಅವನ ಮೆದುಳಿಗೆ ಬಂದಿತ್ತು. ಪ್ರೀತಿಯನ್ನು ಹೃದಯದಿಂದ ಮಾಡಿದರೆ, ಜಗಳವನ್ನು ಮೆದುಳಿನಿಂದ ಮಾಡಲಾಗುತ್ತದೆ. ಅಂದರೆ ಅವನು ಮೊದಲು ತನ್ನ ಮನಸ್ಸಿನಲ್ಲಿ ನನ್ನ ಸ್ವರೂಪವನ್ನು ಬದಲಾಯಿಸಿಕೊಂಡು ನಂತರ ಮೆದುಳಿನಲ್ಲಿ ನನ್ನ ಕರಡನ್ನು 'ಇಟ್ಟುಕೊಂಡವಳು' ಎಂದು ಚಿತ್ರಿಸಿಕೊಂಡಿದ್ದ. ದೈಹಿಕ ಸಂತುಷ್ಟಿಗಾಗಿ ಇಟ್ಟುಕೊಂಡವಳು! ರಿತಿಕ್ ನನ್ನನ್ನು 'ಇಟ್ಟು'ಕೊಂಡಿದ್ದನೇ?

'ಇಟ್ಟುಕೊಂಡವಳ' ಊಟತಿಂಡಿಯ ಖರ್ಚನ್ನು ಅವಳನ್ನು ಇಟ್ಟುಕೊಂಡವನು ಭರಿಸುತ್ತಾನೆ. ನಾನು ಮತ್ತು ರಿತಿಕ್ ಸಹಜೀವಿಗಳಾಗಿದ್ದೆವು. ರಿತಿಕ್ ಸಂಪಾದಿಸುತ್ತಿದ್ದ, ನಾನು ಸಹ ಸಂಪಾದಿಸುತ್ತಿದ್ದೆ. ಮನೆಯ ಖರ್ಚನ್ನು ರಿತಿಕ್‌ನೊಂದಿಗೆ ನಾನು ಸಹ ಭರಿಸುತ್ತಿದ್ದೆ. ಖರ್ಚು ಮಾಡುವ ಈ ಅನುಪಾತದಲ್ಲಿ ಯಾವಾಗ ವ್ಯತ್ಯಾಸವಾಯಿತೋ, ತಿಳಿಯಲೇ ಇಲ್ಲ. ರಿತಿಕ್ ಕಡಿಮೆ ಖರ್ಚು ಮಾಡಲಾರಂಭಿಸಿದ, ನಾನು ಹೆಚ್ಚು ಮಾಡುತ್ತಾ ಹೋದೆ. ನಾನು ಕಚೇರಿಯಿಂದ ಮರಳಿ ಬರುವಾಗ ತರಕಾರಿ ಮತ್ತು ರೇಶನ್ ಕೊಂಡು ತರುತ್ತಿದ್ದೆ. ರಿತಿಕ್ ತನ್ನ ಹೊಣೆಗಾರಿಕೆಯೊಂದಿಗಿನ ಕೆಲಸಗಳನ್ನು ಸುಮಾರಾಗಿ ಮರೆಯುತ್ತಿದ್ದ. ಬಹುಶಃ ಅವನಲ್ಲಿ ಪತಿಯ ಭಾವನೆಗಳು ಮಗ್ಗಲಾಗುತ್ತಿದ್ದವು, ನಾನು ಅದನ್ನು ಆ ದಿನಗಳಲ್ಲಿ ಅರ್ಥ ಮಾಡಿಕೊಳ್ಳಲಿಲ್ಲ. ಆದರೆ ನಾನು ಪತ್ನಿಯ ಹೊಣೆಗಾರಿಕೆಗಳನ್ನು ನಿಭಾಯಿಸುತ್ತಿದ್ದೆ: ರಿತಿಕ್‌ಗೆ ಚಹಾತಿಂಡಿ ಮಾಡುವುದು, ರಿತಿಕ್‌ಗೆ ಊಟದ ಟಿಫಿನ್ ಕ್ಯಾರಿಯರ್ ತುಂಬಿ ಕೊಡುವುದು. ಅವನ ಕರ್ಚೀಫ್‌ಗಳು ಮತ್ತು ಬಟ್ಟೆಗಳನ್ನು ಸಿದ್ಧಪಡಿಸಿಡುವುದು ಎಲ್ಲವನ್ನೂ ಮಾಡುತ್ತಿದ್ದೆ. ಅವನ ಕೊಳಕು ಬಟ್ಟೆಗಳನ್ನು ಮಿಶನ್ನಿಗೆ ಹಾಕಿ, ಸ್ವಚ್ಛಗೊಳಿಸಿದ ನಂತರ ಅವುಗಳನ್ನು ಇಸ್ತ್ರಿ ಮಾಡಿಸಲು ಲಾಂಡ್ರಿವಾಲಾಗೆ ಕೊಡುವುದು; ಕೆಲಸದವಳೊಂದಿಗೆ ಕಿರಿಕ್ ಮಾಡುವುದು... ಹೀಗೆ ಒಬ್ಬ ಶುದ್ಧ ಗೃಹಲಕ್ಷ್ಮಿಯಂತೆ ವರ್ತಿಸುತ್ತಿದ್ದೆ.

ಹಾಂ, ನಾನೊಂದು ವೇಳೆ ಮನೆ ಒಡತಿಯಾಗಿರದಿದ್ದರೆ ಅದು ಹಾಸಿಗೆಯಲ್ಲಿ ಮಾತ್ರ. ಆರಡಿ ಅಗಲ ಮತ್ತು ಎಂಟಡಿ ಉದ್ದದ ಡಬಲ್‌ಬೆಡ್‌ನಲ್ಲಿ ನಾವಿಬ್ಬರು ಪ್ರೇಯಸಿ ಪ್ರಿಯಕರರಂತೆ ಸರಸ ಸಲ್ಲಾಪ ಮಾಡುತ್ತಿದ್ದೆವು. ಅವನು ನನ್ನ ದೇಹದ ವಾಸನೆಗೆ ಒಗ್ಗುವಷ್ಟು ಬೇಸರವಾಗಬಾರದು ಎಂದು ನಾನು ಪ್ರಯತ್ನ ಮಾಡುತ್ತಿದ್ದೆ. ನಾನು ಕಾಮಕಲೆಯ ಹೊಸಹೊಸ ಯುಕ್ತಿಗಳನ್ನು ಅನುಸರಿಸಲು ಉತ್ಸುಕಳಾಗಿರುತ್ತಿದ್ದೆ. ಇದರಿಂದ ರಿತಿಕ್ ತುಂಬಾ ಉತ್ಸಾಹದಲ್ಲಿರುತ್ತಿದ್ದ. ರಾತ್ರಿಯ ರಿತಿಕ್ ಮತ್ತು ಹಗಲಿನ ರಿತಿಕ್‌ನಲ್ಲಿ ಭೂಮಿ ಆಕಾಶದ ಅಂತರವಿರುತ್ತಿತ್ತು. ಹಗಲು ವೇಳೆಯಲ್ಲಿ ರಿತಿಕ್‌ನ ಮೂಡ್ ಹಾಳಾಗಿರುತ್ತಿತ್ತು, ಆದರೆ ರಾತ್ರಿ ತುಂಬಾ ಚೆನ್ನಾಗಿರುತ್ತಿತ್ತು. ಆದರೆ ಪುರುಷರಲ್ಲಿ ಒಳಿತು ಕೆಡಕುಗಳಲ್ಲಿಯೂ ಪ್ರತಿಕೂಲವಾಗಿ ವರ್ತಿಸುವ ಗುಣ ಬಹುಶಃ ಪ್ರಕೃತಿದತ್ತವಾಗಿ ಬಂದಿರುತ್ತದೆ. ನನ್ನ ದೈಹಿಕ ಸಂಬಂಧಗಳನ್ನು ಫ್ರೆಶ್ ಆಗಿ ಇಟ್ಟುಕೊಳ್ಳಲು ನಾನು ಅನೇಕ ಕಲೆಗಳನ್ನು ಅಳವಡಿಸಿಕೊಳ್ಳುತ್ತಿದ್ದೆ, ಆದರೆ ರಿತಿಕ್ ನನ್ನನ್ನು ಅನುಮಾನದಿಂದ ನೋಡುತ್ತಿದ್ದ. ಅವನು ಅದೊಂದು ದಿನ ಈ ಬಗ್ಗೆ ಉದ್ಗಾರವೆತ್ತದಿದ್ದರೆ ಈ ವಿಷಯ ತಿಳಿಯುತ್ತಲೇ ಇರಲಿಲ್ಲ.

'ನೀನು ಪಳಗಿದ ಕ್ರೀಡಾಪಟುವಿನಂತೆ'! ಹೀಗೆಂದು ಹೇಳಿ ರಿತಿಕ್ ನನ್ನನ್ನು ವಸಂತದ ಅರಳಿದ ಬಿಸಿಲಿನಿಂದ ಎತ್ತಿ ಮಂಜಿನ ಹಲಗೆಯ ಮೇಲೆ ಹಾಕಿದ್ದ. ಅವನ ಈ ಒಂದು ಮಾತಿಗೆ ನನ್ನಿಡೀ ದೇಹಕ್ಕೆ ಗರ ಬಡಿದಂತಾಗಿತ್ತು. ನಾನು ಕಂಪಿಸಿದೆ; ಆದರೆ ಅವನು ಇದನ್ನು 'ಕಳ್ಳಿ ಸಿಕ್ಕಿಬಿದ್ದಳು' ಎಂಬಂತೆ ನೋಡಿದ. ನನ್ನೆಲ್ಲಾ ಪ್ರಯೋಗಗಳಿಗೆ ಇದೇ ಕೊನೆಯ ತೀರ್ಮಾನವಾಗಿತ್ತ? ಅವನು ಇಷ್ಟೆಲ್ಲಾ ನನ್ನಿಂದ ಪಡೆದ ನಂತರವೂ ನಾನು ಮಗ್ಗಲಾಗುತ್ತಾ ತುಂಬಾ ಹೊತ್ತು ಕಣ್ಣೀರು ಹಾಕುತ್ತಿದ್ದೆ. ಹಾಂ, ಅಂದು ಎಲ್ಲವೂ ಒಂದೇ ಪಾರ್ಶ್ವದಲ್ಲಿತ್ತು. ನನ್ನೊಳಗಿನ ಪ್ರೇಯಸಿ ಚೆಲ್ಲಾಪಿಲ್ಲಿಯಾಗುವುದು ಆರಂಭವಾಗಿತ್ತು. ನಾನು ತಣ್ಣನೆಯ ಮಹಿಳೆಯಾಗಿ ಅವನನ್ನು ಕಳೆದುಕೊಳ್ಳಲು ಬಯಸುತ್ತಿರಲಿಲ್ಲ, ಆದರೆ ಅಂದಿನ ರಾತ್ರಿಯ ನಂತರ ನನ್ನನ್ನು ನಾನು ತಣ್ಣನೆಯ ಕಂಪನದಿಂದ ದೂರ ಮಾಡಿಕೊಳ್ಳಲೂ ಸಾಧ್ಯವಿರಲಿಲ್ಲ.

(ಸಶೇಷ)